ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಆರ್ಥಿಕತೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 25/5/2020

# ಆರ್‌ಬಿಐ ಟಾನಿಕ್

## ಮಾಸಿಕ ಕಂತು ಪಾವತಿ ಮತ್ತೆ 3 ತಿಂಗಳು ಮುಂದೂಡಿಕೆ

ನವದೆಹಲಿ: ಕುಸಿಯುತ್ತಿರುವ ಆರ್ಥಿಕತೆಗೆ ಉತ್ತೇಜನ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮತ್ತಷ್ಟು ಪರಿಹಾರ ಕ್ರಮ ಘೋಷಿಸಿದೆ.

ಲಾಕ್‌ಡೌನ್‌ನಿಂದಾಗಿ ದೇಶಾದ್ಯಂತ ಕೈಗಾರಿಕಾ ವಲಯವೂ ಸೇರಿದಂತೆ ಬಹುತೇಕ ವಲಯಗಳಲ್ಲಿ ಹಣದ ಓಡಾಟ ನಿಂತಿರುವುದರಿಂದ, ಈ ಸ್ಥಿತಿ ನಿಭಾಯಿಸಲು ಮೂರು ಮಹತ್ವದ ಕ್ರಮಗಳನ್ನು ಆರ್‌ಬಿಐ ಘೋಷಣೆ ಮಾಡಿದೆ. ಅಂದರೆ, ಇನ್ನೂ ಮೂರು ತಿಂಗಳು ಮಾಸಿಕ ಕಂತು ಪಾವತಿ ಮುಂದೂಡಿಕೆ, ರೆಪೋ ಮತ್ತು ರಿವರ್ಸ್ ರೆಪೋ ದರ ಕಡಿತ ಮಾಡಲಾಗಿದೆ.

ಶುಕ್ರವಾರ ಬೆಳಗ್ಗೆ ಸುದ್ದಿಗೋಷ್ಠಿ ನಡೆಸಿದ ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್, ಬ್ಯಾಂಕುಗಳ ಮೇಲೆ ವಿಧಿಸಲಾಗುತ್ತಿದ್ದ ರೆಪೋ ದರವನ್ನು 40 ಮೂಲಾಂಶಗಳಷ್ಟು ಕಡಿತ ಮಾಡುತ್ತಿರುವುದಾಗಿ ಪ್ರಕಟಿಸಿದ್ದಾರೆ. ಇದರಿಂದಾಗಿ, ರೆಪೋ ದರ ಶೇ. 4.40ರಿಂದ ಶೇ. 4ಕ್ಕೆ ಇಳಿದಿದೆ. ಇದರಿಂದಾಗಿ, ಗೃಹ, ವಾಹನ, ವೈಯಕ್ತಿಕ ಸಾಲಗಳ ಮೇಲಿನ ಬಡ್ಡಿ ಇಳಿಕೆಯಾಗಲಿದ್ದು ಮಾಸಿಕ ಕಂತುಗಳೂ ಕಡಿಮೆಯಾಗಲಿವೆ. ಮತ್ತೊಂದೆಡೆ, ರಿವರ್ಸ್ ರೆಪೋ ದರವನ್ನು ಶೇ. 3.75ರಿಂದ 3.35ಕ್ಕೆ ಇಳಿಸಲಾಗಿದ್ದು, ಅಲ್ಲದೆ ಸಾಲ ಮರುಪಾವತಿ ಕಂತುಗಳನ್ನು ಮತ್ತೆ ಮೂರು ತಿಂಗಳವರೆಗೆ (ಆಗಸ್ಟ್ ಕೊನೆವರೆಗೆ) ಮುಂದೂಡಲಾಗಿದೆ ಎಂದು ಅವರು ಹೇಳಿದ್ದಾರೆ.



1

2

ಒಟ್ಟಿಗೆ ಪಾವತಿ ವ್ಯವಸ್ಥೆ